**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 49/2022**

| | | |
|---|---|---|
| ಹೆಸರು | ಮನು | ಸಿ.ಡಬ್ಲ್ಯೂ 12 |
| ತಂದೆಯ ಹೆಸರು | ನಂಜಂಡಸ್ವಾಮಿ | ಪಿ.ಡಬ್ಲ್ಯೂ 6 |
| ವಯಸ್ಸು | 24 ವರ್ಷ | |
| ಉದ್ಯೋಗ | ವ್ಯಾಪಾರ | |
| ವಾಸ ಸ್ಥಳ | ಮಳವಳ್ಳಿ ಟೌನ್ | |

ಸಾಕ್ಷಿಗೆ ದಿನಾಂಕಃ 25.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ ಃ**

ನಾನು ಈಗ ನೋಡುತ್ತಿರುವ ದಾಖಲೆಗೆ 2-3 ವರುಷಗ ಹಿಂದೆ ನಮ್ಮ ಅಂಗಡಿಯ ಹತ್ತಿರ ಪೋಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಅಮಾನತ್ತು ಮಹರಜ್ ಅಗಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6ಎ ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿ ಏನೂ ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಮೋಟಾರ್ ಬೈಕನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈಗ ನೋಡುತ್ತಿರುವ ಪೋಟೋದಲ್ಲಿ ನನ್ನ ಭಾವಚಿತ್ರ ಇರುತ್ತದೆ. ಸದರಿ ಪೋಟೋವನ್ನು ನಿಪಿ-7 ಎಂದು ಗುರುತಿಸಲಾಯಿತು. ಅದನ್ನು ಯಾವ ಉದ್ದೇಶಕ್ಕೆ ತೆಗೆಸಲಾಗಿದೆ ಎಂದು ಗೊತ್ತಿರುವುದಿಲ್ಲ.

**ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**

**<u>ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ</u>**

ದಿನಾಂಕ 21.01.2022 ರಂದು ಅಪಘಾತವಾದ ಸಂಬಂಧವಾಗಿ ಪೋಲೀಸರು ನನ್ನ ಸಮಕ್ಷಮ ನಿಪಿ-6 ರಂತೆ ಪೋಲೀಸ್ ಠಾಣೆಯ ಆವರಣದಲ್ಲಿ ಅಮಾನತ್ತು ಪಂಚನಾಮೆ ಮಾಡಿ ಕೆಎ-11-ಎಹೆಚ್ -9025 ನಂಬರಿನ ವಾಹನವನ್ನು ಅಮಾನತ್ತು ಪಡಿಸಿಕೊಂಡು ನಿಪಿ-7 ರಂತೆ ಪೋಟೋವನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಅರೋಪಿಗೆ ಸಹಾಯ ಮಾಡಲೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃಆರೋಪಿ ಪರ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.